ತೊಂದರೆ ಏನೂ ಇಲ್ಲ. ತಮಗೆ ನಾವು ಎಲ್ಲಾ ರೀತಿಯಲ್ಲೂ ಸಹಕರಿಸುತ್ತೇವೆ. ನಮ್ಮ ತಾಲ್ಲೂಕಿಗೆ ವಿಜ್ಞಾನ ಕಾಲೇಜನ್ನು ಮಂಜೂರು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಅಧ್ಯಕ್ಷರೆ, ತುಂಬಾ ಸಂತೋಷ, ಈಗ 30 ಲಕ್ಷ ರೂಪಾಯಿಗಳನ್ನು ಇದಕ್ಕೆ ಕೊಡುತ್ತೇವೆಂದು ಮುಂದೆ ಬಂದಿರುವುದನ್ನು ನೋಡಿದಾಗ ಇದರ ಅವಶ್ಯಕತೆ ತುಂಬ ಇದೆಯೆಂದು ನನ್ನ ಮನಸ್ಸಿಗೂ ಅನಿಸುತ್ತಿದೆ. ಇದರ ಬಗ್ಗೆ ಪರಿಶೀಲನೆ ಮಾಡಿ ನೋಡುತ್ತೇವೆ.

ವಿಷಯ: ಮೈಸೂರಿನ ಕುವೆಂಪು ನಗರದಲ್ಲಿರುವ ಸರ್ಕಾರಿ ಪ್ರಥಮ ದರ್ಜಿಕಾಲೇಜಿನಲ್ಲಿ ಸಿಬ್ಬಂದಿಯ ನೇಮಕ.

224 (1610)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮೈಸೂರಿಗೆ ಕುವೆಂಪುನಗರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬೋಧಕ ಸಿಬ್ಬಂದಿ ವರ್ಗದ ಕೊರತೆ, ಬೋಧಕೇತರದ ಸಿಬ್ಬಂದಿ ವರ್ಗದ ಕೊರತೆ, ಪೀಠೋಪಕರಣಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಈ ಕೊರತೆಯನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಶಿಕ್ಷಣ ಸಚಿವರು):

1) ಬಂದಿದೆ.

2) ಅ) ವಿದ್ಯಾರ್ಥಿಗಳ ಸಂಖ್ಯೆಯಂತೆ ಅಗತ್ಯ ಪ್ರಮಾಣಕ್ಕನುಗುಣವಾಗಿ 9 ಬೋಧಕರನ್ನು ಅನ್ಯ ಕಾಲೇಜಿನಿಂದ ಹುದ್ದೆಗಳ ಸಮೇತ ಸ್ಥಳ ನಿಯುಕ್ತಿಗೊಳಿಸಲಾಗಿದೆ. ಬೋಧಕೇತರ ಹುದ್ದೆಗಳನ್ನು ರೀ-ಡೆಪ್ಲಾಯ್‌ಮೆಂಟ್ ಆಧಾರದ ಮೇಲೆ ತುಂಬಲಾಗುವುದು.

ಆ) ಪೀಠೋಪಕರಣಗಳ ಕೊರತೆ ನೀಗಿಸಲು ಈಗಾಗಲೇ ರೂ. 1.61 ಲಕ್ಷಗಳ ಪೀಠೋಪಕರಣಗಳನ್ನು ಒದಗಿಸಲಾಗಿದೆ.

10.30ಎ.ಎಂ

ಶ್ರೀ ಹೆಚ್.ಜಿ.ಗೋವಿಂದೇಗೌಡ: ಕುವೆಂಪುನಗರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಕೊರತೆ ಇದೆ ಎಂದು ಕೇಳಿದ್ದಾರೆ. ಬೇರೆ ಕಡೆ, ರಾಜ್ಯದಲ್ಲಿ ಕೊರತೆ ಜಾಸ್ತಿ ಇದೆ, ಆದರೆ ನಮ್ಮ

ಸ್ನೇಹಿತರ ಕಾಲೇಜಿನಲ್ಲಿ ಕೊರತೆ ಹೆಚ್ಚಿನಮಟ್ಟದಲ್ಲಿ ಇಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಆದರೂ ಅವಶ್ಯಕತೆ ಇದೆ. ಈ ಕೊರತೆಯನ್ನು ತುಂಬಲು ವಿದ್ಯಾರ್ಥಿಗಳ ಸಂಖ್ಯೆಯಂತೆ ಅಗತ್ಯ ಪ್ರಮಾಣಕ್ಕನುಗುಣವಾಗಿ 9 ಬೋಧಕರನ್ನು ಅನ್ಯ ಕಾಲೇಜಿನಿಂದ ಹುದ್ದೆಗಳ ಸಮೇತ ಸ್ಥಳ ನಿಯುಕ್ತಿಗೊಳಿಸಲಾಗಿದೆ. ಕಳೆದ ಸಾರಿ ಅಲ್ಲಿ ಏನು ಇರಲೇ ಇಲ್ಲ, ಬೇರೆ ಕಾಲೇಜುಗಳಿಂದ ಒಂದು, ಎರಡು ಹೀಗೆ ಬೋಧಕರನ್ನು ತೆಗೆದುಕೊಂಡು 9 ಬೋಧಕರನ್ನು ಹುದ್ದೆಗಳ ಸಮೇತ ಸ್ಥಳ ನಿಯುಕ್ತಿಗೊಳಿಸಲಾಗಿದೆ. ಬೋಧಕರ ಕೊರತೆ ಅಷ್ಟೊಂದು ಪ್ರಮಾಣದಲ್ಲಿಲ್ಲ. ಪೀಠೋಪಕರಣಗಳಿಗೊಸ್ಕರ ರೂ. 1.61 ಲಕ್ಷ ರೂ.ಗಳನ್ನು ಈ ವರ್ಷದ ಆಯವ್ಯಯದಲ್ಲಿ ಒದಗಿಸಲಾಗಿದೆ, ಅದನ್ನು ಈ ವರ್ಷ ಪೂರೈಸುತ್ತೇವೆ. ಬಹಳ ವರ್ಷಗಳಿಂದ ಯಾವುದೇ ಪ್ರೈಮರಿ, ಹೈಸ್ಕೂಲ್, ಪಿ.ಯು.ಕಾಲೇಜು, ಪ್ರಥಮ ದರ್ಜೆ ಕಾಲೇಜುಗಳಲ್ಲಿ ನಾನ್ ಟೀಚಿಂಗ್ ಸ್ಟಾಫ್ ಅನ್ನು ನೇಮಕ ಮಾಡುತ್ತಿಲ್ಲ. ಒಂದು ವೇಳೆ ಕೊರತೆ ಇದ್ದರೆ ಬೇರೆ ಕಡೆಯಿಂದ ನಿಯೋಜನೆ ಮಾಡುವ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮೈಸೂರಿನ ಕುವೆಂಪುನಗರಕ್ಕೆ ಒಂದು ಸರ್ಕಾರಿ ಪ್ರಥಮದರ್ಜೆ ಕಾಲೇಜನ್ನು ಕೊಟ್ಟಿದ್ದಾರೆ. ಕುವೆಂಪುರವರನ್ನು ಕನ್ನಡದ ಕಂಪು ಇಂಪು ಇತ್ಯಾದಿಯಾಗಿ ಹೇಳಿ ಹೊಗಳುತ್ತಿದ್ದೇವೆ, ಬೆಳೆದಿರತಕ್ಕಂಥ ನಗರದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿ ಇದ್ದು, ದೈಹಿಕ ಶಿಕ್ಷಕರ ಒಂದು ಕೊರತೆ ಇದೆ. ಅಧೀಕ್ಷಕರು, ಬೆರಳಚ್ಚುಗಾರರು ಒಂದೊಂದು ಹುದ್ದೆ ಕೊರತೆ, ಹೀಗೆ ಸುಮಾರು ಹುದ್ದೆಗಳು ಖಾಲಿ ಇದ್ದು, ಅಲ್ಲಿ ಪ್ರಯೋಗ ಶಾಲೆಯೂ ಕೂಡ ಇಲ್ಲದೆ, ಬಹಳ ಚಿಂತಾಜನಕ ಸ್ಥಿತಿಯಲ್ಲಿದೆ. ಒಂದು ಹೆಣ್ಣು ಹುಡುಗಿಗೆ ಶೃಂಗಾರಮಯವಾದ ಬಟ್ಟೆ ಧರಿಸಿ, ಆಭರಣಗಳನ್ನು ಹಾಕಿ ತಿಲಕ ಇಡದಿದ್ದರೆ ಎಷ್ಟು ಅಶುಭವಾಗುತ್ತದೋ ಅಷ್ಟು ಅಶುಭವಾಗಿದೆ. ಮಲೆನಾಡಿನಗಾಂಧಿ ಎಂದು ಹೆಸರುಗಳಿಸಿರುವ ಗೊವಿಂದೇಗೌಡರು ಆ ತಿಲಕವನ್ನು ಇಟ್ಟು ಆ ಹೆಣ್ಣನ್ನು ಶೃಂಗಾರಭರಿತಳಾಗಿ ಮಾಡುವ ರೀತಿಯಲ್ಲಿ ಆ ಕುವೆಂಪುನಗರದ ಕಾಲೇಜಿಗೆ ಆ ಕೊರತೆಯನ್ನು ತುಂಬಿಕೊಡಲೆಂದು ನಾನು ಅವರಲ್ಲಿ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ರಾಜ್ಯಶಾಸ್ತ್ರ, ಭೌತಶಾಸ್ತ್ರ, ಗಣಿತಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ, ವಾಣಿಜ್ಯಶಾಸ್ತ್ರ, ಕನ್ನಡ ಹೀಗೆ ಎಂಟು ಹುದ್ದೆಗಳು ಖಾಲಿ ಇದ್ದುದ್ದನ್ನು ತುಂಬುವ ಕೆಲಸವನ್ನು ಡೆಪ್ಯುಟೇಶನ್ ಮೂಲಕ ಮಾಡುವುದನ್ನು ಈಗಾಗಲೇ ಕೈಗೊಂಡಿದ್ದೇವೆ. ಅಲ್ಲಿ ತಿಳಿದಷ್ಟು ಸಂಖ್ಯೆಯಲ್ಲಿ ಬೋಧಕರ ಕೊರತೆ ಇಲ್ಲ. ಉಪಕರಣಗಳನ್ನು ಒದಗಿಸುವ ಬಗ್ಗೆ ತಾವೇನು ಕುವೆಂಪುರವರ ಹೆಸರನ್ನು ಹೇಳಿದಿರಿ, ಆ ಹೆಸರಿಗೆ ಕಳಂಕ ಬರದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮ ಸರ್ಕಾರದ್ದು ಇರುವುದರಿಂದ ಅಲ್ಲಿ ರೂ. 1.61 ಲಕ್ಷ ರೂ.ಗಳನ್ನು ಪೀಠೋಪಕರಣಗಳಿಗಾಗಿ ಕೊಡಲಾಗಿದೆ. ಹೊಸದಾಗಿ ಕಾಲೇಜು ಪ್ರಾರಂಭವಾದಾಗ ಕಟ್ಟಡಗಳ ಕೊರತೆ,

ಪೀಠೋಪಕರಣಗಳ ಕೊರತೆ ಮತ್ತು ಬೋಧಕರ ಕೊರತೆ ಇವೆಲ್ಲಾ ಇರತಕ್ಕಂಥವು. ಈಗಾಗಲೇ ಅಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬೋಧಕರನ್ನು ನಿಯೋಜನೆ ಮಾಡಿದ್ದೇವೆ, ತಾವು ಮನಸ್ಸಿನಲ್ಲಿ ಯಾವುದೇ ರೀತಿ ಅನ್ಯಥವಿಟ್ಟು ಕೊಳ್ಳಬಾರದೆಂದು ಹೇಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ತಾವು, ಬೇರೆ ಕಡೆಗೆ ಹೋಲಿಸಿದರೆ ಅಲ್ಲಿ ಬೋಧಕರ ಕೊರತೆ ಅಷ್ಟು ಇಲ್ಲ, ಬೇರೆ ಕಡೆ ಅಗಾಧವಾದ ಸಮಸ್ಯೆ ಇದೆ ಎಂದು ಹೇಳಿದಿರಿ. ಶಿಕಾರಿಪುರದಲ್ಲಿ ಒಂದು ಪ್ರಥಮದರ್ಜೆ ಕಾಲೇಜಿದೆ. ನಾನು ಈಗ ಎಲ್ಲಾ ಬೋಧಕರನ್ನು ಹುಡುಕಿಕೊಂಡು ಹೋಗಿ ಅವರು ಒಪ್ಪಿಗೆ ಕೊಟ್ಟ ಮೇಲೆ ನಾನು ಒಂದು ಪಟ್ಟಿಯನ್ನು ನಿನ್ನೆ ತಮಗೆ ಕೊಟ್ಟಿದ್ದೇನೆ, ನಿಮ್ಮ ಇಲಾಖೆಯ ಎಲ್ಲಾ ಅಧಿಕಾರಿಗಳನ್ನು ಸಂಪರ್ಕಿಸಿದ್ದೇನೆ. ಕಳೆದ ಎರಡು ವರ್ಷಗಳಿಂದ ಪ್ರಥಮದರ್ಜೆ ಕಾಲೇಜು ಇದ್ದರೂ ಕೂಡ ಬೋಧಕರಿಲ್ಲದೆ ವಿಜ್ಞಾನ ವಿಭಾಗದಲ್ಲಿ ಇವತ್ತು ಎಲ್ಲರೂ ಶಿವಮೊಗ್ಗಕ್ಕೆ ಹೋಗುತ್ತಿದ್ದಾರೆ. ನಾನು ನಿಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಇವತ್ತು ಗ್ರಾಜುಯೇಟ್ಸ್‌ಗೆ ಏನೂ ಕೊರತೆ ಇಲ್ಲ. ವೈದ್ಯರನ್ನು ನೇರವಾಗಿ ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಹೇಗೆ ಅಧಿಕಾರವನ್ನು ಕೊಟ್ಟಿದ್ದೇವೆಯೋ ಅದೇ ರೀತಿ ಯಾವುದೇ ಕಾಲೇಜಿಗೆ ಅಲ್ಲಿ ಲಭ್ಯವಿರುವ ಬೋಧಕರನ್ನು ನೇಮಕ ಮಾಡಿಕೊಂಡು ಒಂದು ಶಾಶ್ವತ ವ್ಯವಸ್ಥೆಯನ್ನು ಮಾಡದಿದ್ದರೆ ಈ ಸ್ಪರ್ಧಾತ್ಮಕ ಯುಗದಲ್ಲಿ ಆ ಮಕ್ಕಳ ಭವಿಷ್ಯವೇನು? ನಗರದಲ್ಲಿ ಒಬ್ಬ ಮೇಸ್ಟ್ರು ಇಲ್ಲವೆಂದರೆ ಆಗಲೇ ಪೈಪೋಟಿ ಪ್ರಾರಂಭವಾಗುತ್ತದೆ, ಅವತ್ತೆ ಗಲಾಟೆ ಪ್ರಾರಂಭವಾಗುತ್ತದೆ. ಇಲ್ಲಿ ಮೂರ್ನಾಲ್ಕು ವಿಷಯಗಳಿಗೆ ಮೂರ್ನಾಲ್ಕು ಬೋಧಕರಿಲ್ಲದಿದ್ದರೆ ಆ ಮಕ್ಕಳ ಗತಿಯೇನು, ಭವಿಷ್ಯವೇನು? ನಿಮ್ಮ ಕಾಲದಲ್ಲಾದರೂ ಈ ವರ್ಷವಾದರೂ ಅದನ್ನು ತುಂಬುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ರೂಪಿಸುತ್ತೀರಾ? ಇದು ಸಾಮಾನ್ಯವಾಗಿ ಎಲ್ಲಾ ಕಡೆ ಕಿತ್ತುತಿನ್ನುತ್ತಿರುವ ಸಮಸ್ಯೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವವರನ್ನು ಕನ್‌ಫರ್ಮ್ ಮಾಡಬೇಕೆಂದು ತೀರ್ಮಾನಮಾಡಿ ಇನ್ನೇನು ಸರ್ಕಾರದ ಆದೇಶ ಬರಬೇಕಾಗಿತ್ತು. ಅಷ್ಟರಲ್ಲೇ ಕೆಲವರು ನಮಗೆ ಸಿಗಲಿಲ್ಲ ಇವರನ್ನು ಏತಕ್ಕೆ ಮುಂದುವರೆಸುತ್ತೀರೆಂದು ಕೆವೆಟಿಗೆ ಹೋಗಿ ತಡೆಯಾಜ್ಞೆ ತಂದರು, ಅವರನ್ನು ನೇಮಕ ಮಾಡಲಾಗಲಿಲ್ಲ. ಆದರೆ ನಾವು ಈ ಬಗ್ಗೆ ಹೈಕೋರ್ಟಿಗೆ ಹೋಗಿದ್ದೇವೆ. ಕಾಲೇಜುಗಳಲ್ಲಿ ಸುಮಾರು 700, 800 ಜನ ಬೋಧಕರ ಅವಶ್ಯಕತೆ ಇದೆ. ಇದರಿಂದ ಅನಾನುಕೂಲವಾಗಿದೆ ಎಂದು ನಾವು ಗೆಸ್ಟ್ ಬೋಧಕರನ್ನಾದರೂ ಈ ರಾಜ್ಯದಲ್ಲಿ ಒಂದು ಗಂಟೆಗೆ ನೂರು ರೂಪಾಯಿ ಕೊಡುವ ರೀತಿಯಲ್ಲಿ ನೇಮಕ ಮಾಡಿಕೊಳ್ಳಿ ಎಂದು ಕಾಲೇಜಿನ ಪ್ರಿನ್ಸಿಪಾಲರಿಗೆ ಅಧಿಕಾರಕೊಟ್ಟು ಸರ್ಕಾರಿ ಆದೇಶವನ್ನು ಕೊಟ್ಟಿದ್ದೇವೆ. ಕೆಲವು ಕಡೆ ನೇಮಕ ಮಾಡಿಕೊಂಡಿದ್ದಾರೆ. ಸ್ನೇಹಿತರು ನನಗೆ ಹಲವಾರು ಸಾರಿ ಹೇಳಿದ್ದಾರೆ. ಇದೇ ರೀತಿ ಎಲ್ಲಿ ಹೆಚ್ಚಿನ ಬೋಧಕರಿರುತ್ತಾರೋ ಅವರನ್ನು ನಾನು

ನಿಯೋಜನೆ ಮಾಡುವುದು ಬಿಟ್ಟರೆ ಮತ್ತೆ ಬೇರೆ ಏನು ಮಾಡುವುದಕ್ಕಾಗುವುದಿಲ್ಲ. ಆಯಾ ಕಡೆ ಯಾರು ಗೆಸ್ಟ್ ಬೋಧಕರಿರುತ್ತಾರೆ ಅವರು ಆಯಾ ಕಾಲೇಜಿನಲ್ಲಿ ಒಂದು ಗಂಟೆ ಪಾಠ ಮಾಡುವುದಕ್ಕೆ ಒಂದು ನೂರು ರೂಪಾಯಿಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಇದಕ್ಕೆ ನಮ್ಮ ಶಾಸಕ ಮಿತ್ರರು ಸಹಕರಿಸಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್.ಎಸ್.ಶಂಕರಲಿಂಗೆಗೌಡ: ಕಾಲೇಜುಗಳಿಗೆ ಒಂದು ಗಂಟೆ ಪಾಠ ಮಾಡುವ ಆಧಾರದ ಮೇಲೆ ಹೋಗುತ್ತಿರುವ ಬೋಧಕರಿಗೆ ಎರಡು ವರ್ಷಗಳಿಂದ ಹಣವನ್ನೇ ಕೊಟ್ಟಿಲ್ಲ. ಅವರೆಲ್ಲರೂ ಬಹಳ ಕಡೆ ಹೋಗುವುದಕ್ಕೆ ಇಷ್ಟಪಡುತ್ತಿಲ್ಲ. ಟೆಂಪರರಿ ಅಪಾಯಿಂಟ್‌ಮೆಂಟ್ ಆಧಾರದ ಮೇಲೆ ನೇಮಕ ಆಗಿರುವರು ಮೂರ್ನಾಲ್ಕುಗಂಟೆ ದಿವಸಕ್ಕೆ ಪಾಠ ಮಾಡಿರುತ್ತಾರೆ, ಎರಡು ವರ್ಷಗಳಿಂದ ಅವರಿಗೆ ಹಣವನ್ನೇ ಕೊಟ್ಟಿಲ್ಲ, ಅವರೆಲ್ಲಾ ನಾವು ಕಾಲೇಜಿಗೆ ಪಾಠ ಮಾಡುವುದಕ್ಕೆ ಹೋಗುವುದಿಲ್ಲವೆಂದು ಹೇಳುವ ವದಂತಿ ಇದೆ.

ಅಧ್ಯಕ್ಷರು: ಅದನ್ನು ಕೊಡಿಸುವ ವ್ಯವಸ್ಥೆ ಮಾಡಿಸೋಣ.

ವಿಷಯ: ದಾವಣಗೆರೆ ತಾಲ್ಲೂಕಿನಲ್ಲಿ ಪದವಿಪೂರ್ವ ಕಾಲೇಜು ಕಟ್ಟಡಗಳ ನಿರ್ಮಾಣ.

226 (1496)

ಶ್ರೀ ಎಸ್.ಎ.ರವೀಂದ್ರನಾಥ್ (ಮಾಯಕೊಂಡ): ಮಾನ್ಯ ಪ್ರಾಥಮಿಕ ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ತಾಲ್ಲೂಕಿನಲ್ಲಿ ಎಷ್ಟು ಪದವಿ ಪೂರ್ವ ಕಾಲೇಜುಗಳಿವೆ?

ಆ) ಆ ಪೈಕಿ ಎಷ್ಟು ಕಾಲೇಜುಗಳು ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿವೆ?

ಇ) ಉಳಿದ ಕಾಲೇಜುಗಳಿಗೆ ಯಾವಾಗ ಕಟ್ಟಡವನ್ನು ಕಟ್ಟಲಾಗುವುದು? (ವಿವರವಾದ ಮಾಹಿತಿ ನೀಡುವುದು)

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು):

ಅ) ದಾವಣಗೆರೆ ತಾಲ್ಲೂಕಿನಲ್ಲಿ 11 ಸರ್ಕಾರಿ 07 ಅನುದಾನಿತ ಮತ್ತು 16 ಅನುದಾನ ರಹಿತ ಪದವಿಪೂರ್ವ ಕಾಲೇಜುಗಳು ಇರುತ್ತವೆ.

ಆ) ಎಲ್ಲಾ ಸರ್ಕಾರಿ ಪದವಿಪೂರ್ವ ಕಾಲೇಜುಗಳು ಸ್ವಂತ ಕಟ್ಟಡಗಳಲ್ಲಿ